**ದಿನಾಂಕ : 07.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ವಕೀಲರಿಂದ**

ದಾವೆ ಸಂಖ್ಯೆ 721/2016 ರನ್ನು ಸಲ್ಲಿಸಿದ ಸಮಯದಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿದ್ದೆ. ಸದರಿ ದಾವೆಯಲ್ಲಿ ನನಗೆ ಮಾಹಿತಿ ಕೊಟ್ಟಾಗ ಪ್ರತಿ ವಿಚಾರಣೆ ದಿನದಂದು ಹಾಜರಾಗಿರುತ್ತೇನೆ. ನಾನು ನಮ್ಮ ವಕೀಲರು ಹೇಳಿದಾಗ ಮಾತ್ರ ನ್ಯಾಯಲಯದಲ್ಲಿ ಹಾಜರಾಗುತ್ತಿದ್ದೆ ವ್ಯಯಕ್ತಿಕವಾಗಿ ಹಾಜರಾಗುತ್ತಿರಲಿಲ್ಲ ಎಂದರೆ ಸರಿ. ನಮ್ಮ ವಕೀಲರು ಪ್ರತಿ ವಿಚಾರಣೆ ದಿನದಂದು ಹಾಜರಾಗ ಬೇಡಿ ಎಂದು ನನಗೆ ಹೇಳಿರುವುದಿಲ್ಲ. ಸದರಿ ದಾವೆಯನ್ನು ಸಲ್ಲಿಸಿದ ನಂತರ ನಾನು ಯಾವ ದಿನಾಂಕದಂದು ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ ಯಾವ ದಿನಾಂಕದಂದು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ವಿಚಾರಣೆಗೆ ಯಾವ ದಿನಾಂಕದಂದು ನಿಗತಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಎಷ್ಟು ದಿನಗಳ ಕಾಲ ಸಮಯ ನಿಗದಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಕೊನೆಯ ಬಾರಿಗೆ ನನ್ನ ಸಾಕ್ಷಿ ವಿಚಾರಣೆಗೆ ಯಾವ ದಿನಾಂಕ ನಿಗದಿಯಾಗಿತ್ತು ಎಂದು ನನಗೆ ಗೊತ್ತಿಲ್ಲ ಏಕೆಂದರೆ ನಮ್ಮ ವಕೀಲರು ಅದರ ಬಗ್ಗೆ ಮಾಹಿತಿಯನ್ನು ನೀಡಿರಲಿಲ್ಲ. ತುಂಬ ದಿನಗಳ ನಂತರ ಸದರಿ ದಾವೆ ವಿಚಾರಣೆಗೆ ಬರಲಿಲ್ಲ ಎಂದು ನಾನು ನಮ್ಮ ವಕೀಲರ ಬಳಿ ವಿಚಾರಿಸಿದಾಗ ಅವರು ನನಗೆ ಸತ್ಯಾಂಶವನ್ನು ಮರೆಮಾಚಿದ್ದರು ನಂತರ ನಾನು ಬೇರೆ ವಕೀಲರನ್ನು ನೇಮಿಸಿಕೊಂಡು ಅವರ ಮೂಲಕ ಸದರಿ ದಾವೆಯ ಬಗ್ಗೆ ತಿಳಿದು ಕೊಂಡಿರುತ್ತೇನೆ. ಯಾವ ದಿನಾಂಕದಂದು ನನು ನಮ್ಮ ಹಿಂದಿನ ವಕೀಲರನ್ನು ಬೇಟಿಯಾಗಿದ್ದೆ ಎಂದು ನೆನಪಿಲ್ಲ. ನಮ್ಮ ಹಿಂದಿನ ವಕೀಲರಿಂದ ಯಾವ ದಿನಾಂಕದಂದು ನಾನು ನನ್ನ ಕೇಸಿನ ದಾಖಲೆಗಳನ್ನು ಅವರಿಂದ ಪಡೆದುಕೊಂಡಿದ್ದೇನೆ ಎಂದು ನನಗೆ ನೆನಪಿಲ್ಲ. ಕೇಸಿನ ದಾಖಲೆಗಳನ್ನು ನಮ್ಮ ಹಿಂದಿನ ವಕೀಲರಿಂದ ಪಡೆದು ಯಾವ ದಿನಾಂಕದಂದು ನನ್ನ ಈಗಿನ ವಕೀಲರಿಗೆ ಕೊಟ್ಟಿದ್ದೆನೆ ಎಂದು ನನಗೆ ನೆನಪಿಲ್ಲ. ಪ್ರಪ್ರಥಮ ಬಾರಿಗೆ 16.04.2019 ರಂದು ನ್ಯಾಯಾಲಯದಲ್ಲಿ ನನ್ನ ಸಾಕ್ಷಿ ವಿಚಾರಣೆಗೆ ದಿನಾಂಕ ನಿಗದಿಯಾಗಿತ್ತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆನಂತರ 5 ಬಾರಿ ನನ್ನ ಸಾಕ್ಷಿ ವಿಚಾರಣೆಗೆ ದಿನಾಂಕ ನಿಗದಿ ಮಾಡಿದ್ದರು ಎಂದರೆ ಅದರ ಬಗ್ಗೆ ನಮ್ಮ ವಕೀಲರು ಮಾಹಿತಿಯನ್ನು ನೀಡಿರುವುದಿಲ್ಲ. ಸದರಿ ದಾವೆ ಯಾವ ದಿನಾಂಕದಂದು ವಜಾ ಆಗಿದೆ ಎಂದು ನನಗೆ ಗೊತ್ತಿಲ್ಲ ಏಕೆಂದರೆ ನಮ್ಮ ವಕೀಲರು ನನಗೆ ಮಾಹಿತಿಯನ್ನು ನೀಡಿರುವುದಿಲ್ಲ. ಸದರಿ ದಾವೆ 2022 ನೇ ಇಸವಿಯಲ್ಲಿ ವಾಜಾ ಆಗಿದೆ ಎಂದು ನಮ್ಮ ಈಗಿನ ವಕೀಲರು

This is a True Copy of the Court Records Online. Authenticated @ districts.ecourtsindia.com/cnr/KABR020012842023/truecopy/order-1.pdf

ತಿಳಿಸಿರುತ್ತಾರೆ ದಿನಾಂಕ ನನಗೆ ನೆನಪಿಲ್ಲ. ನನ್ನ ಈಗಿನ ವಕೀಲರು ದಾವೆ ವಜಾ ಆಗಿರುವ ವಿಚಾರವನ್ನು ಯಾವ ದಿನಾಂಕದಂದು ತಿಳಿಸಿದ್ದಾರೆ ಎಂದು ನನಗೆ ನೆನಪಿಲ್ಲ. ಈಗಿನ ವಕೀಲರು ನನ್ನ ದಾವೆ ವಜಾ ಆಗಿರುವ ದಿನಾಂಕವನ್ನು ತಿಳಿಸಿರುವ ವಿಚಾರ ನನಗೆ ಗೊತ್ತು ಎಂದರೆ ಸರಿ. ನನ್ನ ದಾವೆ ವಜಾ ಆದ ಬಗ್ಗೆ ನನಗೆ ವಿಚಾರ ತಿಳಿದ ನಂತರ ಈಗಿನ ವಕೀಲರಿಗೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲು ನಾನು ಕೇಳಿಕೊಂಡಿದ್ದು ಈ ಅರ್ಜಿಯನ್ನು ಸಲ್ಲಿಸುವ ಸ್ವಲ್ಪ ದಿನಗಳ ಮೊದಲು ಆಗಿರುತ್ತದೆ. ದಾವೆ ವಜಾ ಆದ ನಂತರ ಈ ಅರ್ಜಿಯನ್ನು ಸಲ್ಲಿಸಲು 205 ದಿನಗಳು ತಡ ಆಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ನನ್ನ ಹಿಂದಿನ ವಕೀಲರು ಮಾಹಿತಿ ನೀಡಿರುವುದಿಲ್ಲ ಅದಕ್ಕೆ ನನಗೆ ಅದರ ಅರಿವಿರುವುದಿಲ್ಲ. ಸದರಿ ದಾವೆ ವಜಾ ಆಗಿರುವುದು ನನ್ನ ಈಗಿನ ವಕೀಲರನ್ನು ನಾನು ನೇಮಿಸಿ ಕೊಂಡ ನಂತರ ಎಂದರೆ ಸರಿಯಲ್ಲ. ಸಾಕ್ಷಿ ಸತಹ ನನ್ನ ಹಿಂದಿನ ವಕೀಲರು ಇದ್ದಾಗಲೆ ದಾವೆ ವಜಾ ಆಗಿರುತ್ತದೆ ಎಂದು ನುಡಿದಿದ್ದಾರೆ.

ಈ ಅರ್ಜಿಯನ್ನು ಸಲ್ಲಿಸಲು ತಡವಾಗಿರುವ ಕಾರಣ ಏನೆಂದರೆ ನನ್ನ ಹಿಂದಿನ ವಕೀಲರು ನನಗೆ ಸದರಿ ದಾವೆಯ ಬಗ್ಗೆ ಸ್ಪಷ್ಟವಾಗಿ ಮಾಹಿತಿಯನ್ನು ನೀಡಿರಲಿಲ್ಲ ಮತ್ತು ನನೂ ನನ್ನ ಬೇರೆ ವಕೀಲರ ಮೂಲಕ ನನ್ನ ದಾವೆಯ ಬಗ್ಗೆ ತಿಳಿದುಕೊಂಡು ಈ ಅರ್ಜಿಯನ್ನು ಸಲ್ಲಿಸಲು ತಡವಾಗಿರುತ್ತದೆ. ನನ್ನ ಪ್ರಕಾರ ಈ ಅರ್ಜಿಯನ್ನು ಸಲ್ಲಿಸಲು ತಡ ಆಗಿರುವುದಕ್ಕೆ ಕಾರಣ ನನ್ನ ಹಿಂದಿನ ವಕೀಲರು ಆಗಿರುತ್ತಾರೆ. ನನ್ನ ಹಿಂದಿನ ವಕೀಲರ ವಿರುದ್ಧ ದೂರನ್ನು ಕೊಡಲು ನನಗೆ ಅರಿವು ಇರಲಿಲ್ಲ. ದಾವೆ ವಜಾ ಆಗಲು ನನ್ನ ಹಿಂದಿನ ವಕೀಲರು ಕಾರಣ ಆಗಿರುವುದಿಲ್ಲ, ಆದರೆ ಈ ದಾವೆಯ ಮೇಲೆ ನನಗೆ ಅನಾಸಕ್ತಿಯೇ ಕಾರಣ ಎಂದರೆ ಸರಿಯಲ್ಲ. ನನ್ನ ಅನಾಸಕ್ತಿಯಿಂದಲೆ ಪ್ರಸ್ತುತ ಅರ್ಜಿಯನ್ನು ನನ್ನ ಈಗಿನ ವಕೀಲರ ಮೂಲಕ ತಡವಾಗಿ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.

7ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಬೆಂ. ಗ್ರಾಮಾಂತರ ಜಿಲ್ಲೆ, ಬೆಂಗಳೂರು.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABR020012842023/truecopy/order-1.pdf